# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1009
ಸದಸ್ಯರ ಹೆಸರು : ಶ್ರೀ ಛಲವಾದಿ .ಟಿ. ನಾಯಾರಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 24.07.2024
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯ ಸರ್ಕಾರವು 2023-24 ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿದೆಯೇ; ಈ ಪ್ರದೇಶದಲ್ಲಾದ ಬೆಳೆನಷ್ಟವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಲಿಂಗಸುಗೂರು ತಾಲ್ಲೂಕನ್ನು 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಪೀಡಿತವೆಂದು ಘೋಷಿಸಲಾಗಿದೆ. ಲಿಂಗಸುಗೂರು ತಾಲ್ಲೂಕಿನಲ್ಲಿ ಸುಮಾರು 40040.00 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಅಂದಾಜಿಸಲಾಗಿದೆ. |
| (ಆ) ಈ ತಾಲ್ಲೂಕಿನಲ್ಲಿ ಬೆಳೆ ನಷ್ಟ ಪರಿಹಾರವನ್ನು ಎಷ್ಟು ಜನ ರೈತರಿಗೆ ಪಾವತಿ ಮಾಡಲಾಗಿದೆ ಪಾವತಿಸಿದ ಮೊತ್ತವೆಷ್ಟು; ಎಷ್ಟು ಜನ ರೈತರು ಬೆಳೆ ನಷ್ಟ ಪರಿಹಾರ ಪಾವತಿಯಿಂದ ಹೊರಗುಳಿದಿದ್ದಾರೆ; ಹೊರಗುಳಿಯಲು ಕಾರಣಗಳೇನು; ಪರಿಹಾರಕ್ಕೆ ಎಷ್ಟು ಜನ ಅರ್ಹರಿರುವುದಿಲ್ಲ; ಅದಕ್ಕೆ ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಲಿಂಗಸುಗೂರು ತಾಲ್ಲೂಕಿನಲ್ಲಿ ಈ ವರೆಗೆ ಒಟ್ಟು 24,913 ರೈತರಿಗೆ ರೂ. 30,37,62,648/- ಗಳ ಪರಿಹಾರ ಮೊತ್ತವನ್ನು ನೇರವಾಗಿ ರೈತರ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗಳಿಗೆ DBT ಮೂಲಕ ಸಂದಾಯ ಮಾಡಲಾಗಿರುತ್ತದೆ.<br><br>ಬಾಧಿತ ರೈತರಿಗೆ ತ್ವರಿತವಾಗಿ ಮತ್ತು ಕ್ರಮಬದ್ಧವಾಗಿ ಬೆಳೆ ಹಾನಿ ಪರಿಹಾರವನ್ನು ವಿತರಿಸಲು FRUITS ತಂತ್ರಾಂಶದಲ್ಲಿ ನೋಂದಣಿಯಾಗಿ Farmers ID ಹೊಂದಿರುವ ಹಾಗೂ ಬರ ಘೋಷಣೆಯಾಗಿರುವ ತಾಲ್ಲೂಕುಗಳಲ್ಲಿ ಬೆಳೆಗಳಿಗೆ ಅರ್ಹ ರೈತರಿಗೆ ಪರಿಹಾರ ನೀಡಲಾಗಿದೆ. |
| ( ಇ) ಸದರಿ ತಾಲ್ಲೂಕಿನ ರೈತರು ಬರದಿಂದ ತಮ್ಮ ಹಿಂಗಾರು ಮತ್ತು ಮುಂಗಾರು ಹಂಗಾಮಿನ ಬೆಳೆಗಳನ್ನು ಕಳೆದುಕೊಂಡರೂ ಕೂಡಾ ಬೆಳೆ ನಷ್ಟವು ಆಗಿರುವುದಿಲ್ಲ ಎಂದು ವರದಿಯನ್ನು ನೀಡಿ ಬೆಳೆ ವಿಮೆಯನ್ನು ಪಡೆಯಲು ಅನರ್ಹರನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾರಣಕ್ಕಾಗಿ ಬೆಳೆ ನಷ್ಟವಾಗಿರುವುದಿಲ್ಲ ಎಂದು ವರದಿಯನ್ನು ನೀಡಲಾಗಿದೆ; ಬೆಳೆ ನಷ್ಟ ಅನುಭವಿಸಿದ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ; | ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯು ಇಳುವರಿ ಆಧಾರಿತ ಯೋಜನೆಯಾಗಿರುತ್ತದೆ. ಬೆಳೆ ಕಟಾವು ಪ್ರಯೋಗಗಳ ವಾಸ್ತವಿಕ ಇಳುವರಿಯು (Actual Yield) ಹಿಂದಿನ ವರ್ಷಗಳಲ್ಲಿ ಉತ್ತಮ ಐದು ವರ್ಷಗಳ ಇಳುವರಿಯನ್ನು ಪರಿಗಣಿಸಿ ಲೆಕ್ಕ ಹಾಕಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆಯಿದ್ದಲ್ಲಿ ಬೆಳೆ ವಿಮೆ ಪರಿಹಾರ ಮಂಜೂರಾಗುತ್ತದೆ.<br><br>ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಆಣೆವಾರಿ ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇಲಾಖೆ ಅಥವಾ ಸಂಸ್ಥೆಯು ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಬೆಳೆ ವಿಮಾ ನಷ್ಟ ಲೆಕ್ಕಹಾಕಲು ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ. |
| (ಈ) ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಈ ತಾಲ್ಲೂಕಿನಲ್ಲಿ ಬೆಳೆವಿಮೆ ಮಾಡಿಸಿದ ರೈತರ ಸಂಖ್ಯೆ ಎಷ್ಟು; ರೈತರ ಬೆಳೆನಷ್ಟಕನುಗುಣವಾಗಿ ಎಷ್ಟು ಮೊತ್ತದ ಬೆಳೆ ವಿಮೆ ಹಣವನ್ನು ರೈತರಿಗೆ ಪಾವತಿಸಲಾಗಿದೆ; ಬೆಳೆನಷ್ಟ ಅನುಭವಿಸಿ ಸರ್ಕಾರದಿಂದ ಬೆಳೆ ನಷ್ಟ ಪರಿಹಾರ ಪಡೆದರೂ ಕೂಡ ತಾಲ್ಲೂಕು ಆಡಳಿತ ನೀಡಿರುವ ಬೆಳೆನಷ್ಟವಾಗಿಲ್ಲವೆಂಬ ವರದಿಯಿಂದ ಬೆಳೆವಿಮೆಯನ್ನು | ಲಿಂಗಸುಗೂರು ತಾಲ್ಲೂಕಿನಲ್ಲಿ 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 89 ವಿಮಾ ಘಟಕಗಳಿಗೆ 13,525 ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದು, ಸದರಿ ವಿಮಾ ಘಟಕಗಳಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡಿರುವ ವಾಸ್ತವಿಕ ಇಳುವರಿ ಹಾಗೂ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ವಿಮೆ ಪರಿಹಾರ |

| | |
|---|---|
| ಪಡೆಯಲು ಅನರ್ಹರಾಗುವಂತೆ ಮಾಡಿರುವವರ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ಸರ್ಕಾರವು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು) | ಮಂಜೂರಾಗಿರುವುದಿಲ್ಲ.<br>ಹಿಂಗಾರು ಹಂಗಾಮಿನಲ್ಲಿ 78 ವಿಮಾ ಘಟಕಗಳಿಗೆ 4,184 ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದು, ಸದರಿ ವಿಮಾ ಘಟಕಗಳಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು 47 ವಿಮಾ ಘಟಕಗಳಿಗೆ ನೀಡಿರುವ ವಾಸ್ತವಿಕ ಇಳುವರಿ ಹಾಗೂ ಯೋಜನೆಯ ಮಾರ್ಗಸೂಚಿಯನ್ವಯ ಅರ್ಹ 4 ವಿಮಾ ಘಟಕಗಳ ಒಟ್ಟು 59 ಅರ್ಹ ರೈತ ಫಲಾನುಭವಿಗಳಿಗೆ ರೂ. 15.78 ಲಕ್ಷಗಳ ಬೆಳೆ ವಿಮೆ ಪರಿಹಾರ ಮಂಜೂರು ಮಾಡಲಾಗಿರುತ್ತದೆ.<br><br>ಲಿಂಗಸೂಗೂರು ತಾಲ್ಲೂಕು ಆಡಳಿತ ಬೆಳೆ ನಷ್ಟವಾಗಿಲ್ಲವೆಂಬ ಯಾವುದೇ ವರದಿಯನ್ನು ಬೆಳೆ ವಿಮೆ ಯೋಜನೆಯಡಿ ನೀಡಿರುವುದಿಲ್ಲ.<br><br>ಬೆಳೆ ಕಟಾವು ಪ್ರಯೋಗಗಳನ್ನು ಮೊಬೈಲ್ ಆಪ್ ಮೂಲಕ ಕೈಗೊಂಡು ಸದರಿ ಇಳುವರಿ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ಮಾರ್ಗಸೂಚಿಯನ್ವಯ ಇತ್ಯರ್ಥಪಡಿಸಿದ್ದು, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಕಂಇ 335 ಟಿಎನ್ಆರ್ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು